**ದಿನಾಂಕ: 10-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಬಿ ಎಂ ವಕೀಲರಿಂದ ಆರೋಪಿ ಪರವಾಗಿಃ**

21) ನಿಡಿ 3, ನಿಡಿ 11, ನಿಡಿ 22, ನಿಡಿ 29, ನಿಡಿ 36, ನಿಡಿ 41, ನಿಡಿ 42, ನಿಡಿ 47, ನಿಡಿ53, ನಿಡಿ 66, ನಿಡಿ 72, ನಿಡಿ 81, ನಿಡಿ 87, ನಿಡಿ 94, ನಿಡಿ 101, ನಿಡಿ 108, ನಿಡಿ115, ನಿಡಿ 122, ನಿಡಿ 129, ನಿಡಿ 136 ಮತ್ತು ನಿಡಿ 142 ರಲ್ಲಿ ನಮೂದಿಸಿರುವ ಹಣವನ್ನು ಸಂಬಂಧಪಟ್ಟ ಆರೋಪಿಗಳಿಗೆ ನಗದಾಗಿ ನೀಡಿದ್ದೀರೋ ಅಥವಾ ಚೆಕ್ ಮುಖಾಂತರ ನೀಡಿದ್ದೀರೋ ಎಂದು ಪ್ರಶ್ನಿಸಲಾಗಿ ಸಾಕ್ಷಿ ಕೆಲವನ್ನು ಚೆಕ್ ಮುಖಾಂತರವೂ ಮತ್ತು ಕೆಲವೊಂದು ನಗದು ಮುಖಾಂತರ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಎಲ್ಲ ಚೆಕ್ ಗಳು ಒಂದು ಕೋಟಿಗಿಂತ ಹೆಚ್ಚು ವ್ಯವಹಾರ ಇದೆ ಎಂದು ಸೂಚಿಸಲಾಗಿ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

22) ನಿಪಿ 1 ಚೆಕ್ ನ್ನು ಆರೋಪಿಯೇ ಬರೆದಿರುತ್ತಾರೆ. ನಿಪಿ 1 ಚೆಕ್ಕಿನಲ್ಲಿರುವ ಬರವಣಿಗೆ ಮತ್ತು ನಿಪಿ2 ರಲ್ಲಿರುವ ಬರವಣಿಗೆ ಒಂದೇ ಆಗಿದೆ ಎಂದು ಸೂಚಿಸಲಾಗಿ ಸಾಕ್ಷಿ ಆರೋಪಿಯೇ ನಿಪಿ1 ಮತ್ತು 2 ನ್ನು ಬರೆದುಕೊಟ್ಟಿದ್ದು, ಬ್ಯಾಂಕಿಗೆ ಕಲೆಕ್ಷನ್ ಗೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ 1 ಚೆಕ್ ನ್ನು ಯಾವಾಗ ಬರೆದುಕೊಟ್ಟಿರುತ್ತಾರೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಸುಮಾರು ವರ್ಷಗಳಾಗಿರುವುದರಿಂದ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ.

23) ನಿಪಿ 2 ಯಾವ ಬ್ಯಾಂಕಿನದು ಎಂದು ಪ್ರಶ್ನಿಸಲಾಗಿ ಸಾಕ್ಷಿ ಸೆಂಟ್ರಲ್ ಬ್ಯಾಂಕ್ ಎಂದು ನುಡಿಯುತ್ತಾರೆ. ನಿಪಿ 2 ಚಲನ್ ನ್ನು ಯಾರು ತಂದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ನಾನು ಆರೋಪಿ ಒಟ್ಟಿಗೆ ಇದ್ದು, ಆರೋಪಿಯೇ ತಂದರು ಎಂದು ನುಡಿಯುತ್ತಾರೆ. ನಿಪಿ 1 ಚೆಕ್ ನ್ನು ಬರೆದ ಸಮಯದಲ್ಲಿ ಯಾರು ಇದ್ದರು ಎಂದು ಪ್ರಶ್ನಿಸಲಾಗಿ ಸಾಕ್ಷಿ ಯಾರು ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಬರೆದುಕೊಟ್ಟಾಗ ಒಂದೇ ಚೆಕ್ ಇತ್ತಾ ಚೆಕ್ ಬುಕ್ ಇತ್ತಾ ಎಂದು

ಪ್ರಶ್ನಿಸಲಾಗಿ ಸಾಕ್ಷಿ ಚೆಕ್ ಬುಕ್ ಇತ್ತು ಎಂದು ನುಡಿಯುತ್ತಾರೆ. ನಿಪಿ 1 ನ್ನು ನನ್ನ ಎದುರಿಗೆ ಬರೆದು ಮೊತ್ತ ಹಾಕಿ ಬರೆದುಕೊಟ್ಟಿರುತ್ತಾರೆ.

24) ಆರೋಪಿಯ ಬರವಣಿಗೆ ಗೊತ್ತಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಚೆಕ್ ನ್ನು ಬರೆದುಕೊಟ್ಟಿರುವುದು ಗೊತ್ತು ಬೇರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ 1 ಮತ್ತು 2 ನ್ನು ಆರೋಪಿ ಬರೆದುಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

25) ನೋಟೀಸ್ ಆರೋಪಿಗೆ ಜಾರಿಯಾಗಿರುತ್ತದೆ . ನಿಪಿ 4 ನೋಟೀಸ್ ಆರೋಪಿಗೆ ಜಾರಿಯಾಗಿರುತ್ತದೆ ಯಾವಾಗ ಜಾರಿಯಾಗಿರುತ್ತದೆ ಎಂದು ಗೊತ್ತಿಲ್ಲ. ಆರೋಪಿಯ ಮನೆ ಗುಣಿಕೆರೆ ಬೀದಿಯಲ್ಲಿರುತ್ತದೆ. ಆರೋಪಿಯು ಯಾವಾಗಲೂ ಬೇಲೂರಿನ ಎಲೆಕ್ಟ್ರಿಕ್ ಕಚೇರಿಯಲ್ಲಿ ಇರುತ್ತಾರೆ ಎಂದರೆ ಸರಿ. ಆರೋಪಿ ಕ್ಲಾಸ್ 1 ಗುತ್ತಿಗೆದಾರ ಎಂದರೆ ಸರಿ.

ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಬೇಲೂರು .